**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 14.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 8 ಮತ್ತು 9 ರವರ ಪರ ಶ್ರೀ ಟಿ ಟಿ ಎಂ ವಕೀಲರಿಂದ :**

ನಮ್ಮ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಬಾಳಪ್ಪ ದಿಃ 01.11.2017 ರಂದು ಮೃತ ಪಟ್ಟಿರುವನು ಎಂದರೆ ಸರಿ. ಇತನ ಹೆಂಡತಿ ಸುಶೀಲಾಬಾಯಿ ದಿಃ 10.01.2004 ರಂದು ಮೃತ ಪಟ್ಟಿರುವಳು ಎಂದರೆ ಸರಿ. ಮೂಲ ಪುರುಷನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು 5 ಜನ ಗಂಡು ಮಕ್ಕಳು. ಅವರೇಂದರೆ ಪ್ರತಿವಾದಿ 1, ಮೃತ ಪಟ್ಟಿರುವ ಮೀನಾಕ್ಷಿ ಎಂಬ ಇಬ್ಬರು ಹೆಣ್ಣು ಮಕ್ಕಳು. ಇವಳು ವಿವಾಹವಾಗದೇ ಮೃತ ಪಟ್ಟಿರುವಳು. ಮೃತ ನಿಂಗರಾಜ ನನ್ನ ತಂದೆಯಾಗಿರುವನು ಎಂದರೆ ಸರಿ. ವಾದಿ 1 ರವರು ನನ್ನ ತಾಯಿ, ನಾನು ಹಾಗೂ ಉಳಿದ ವಾದಿಯರು ನನ್ನ ತಂದೆಯ ವಾರಸುದಾರರಾಗಿರುವೆವು. ಪ್ರತಿವಾದಿ 2 ರಿಂದ 4 ರವರು ಕುಟುಂಬದ ಮೂಲ ಪುರುಷ ಬಾಳಪ್ಪನ ಮಕ್ಕಳು ಎಂದರೆ ಸರಿ. ಅದೇ ರೀತಿ ಮೃತ ವಿಜಯಕುಮಾರ ಸಹ ಬಾಳಪ್ಪನ ಮಗನಾಗಿರುವನು ಎಂದರೆ ಸರಿ.

2. ದಾವಾ ಷೆಡ್ಯೂಲ್ ಬಿ ದ ಅಸ್ತಿ ಕ್ರಮ ಸಂಖ್ಯೆ 1 ಬಾಳಪ್ಪನಿಗೆ ಹಿರಿಯರಿಂದ ಬಂದಿರುವಂತಹ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ 2 ರಿಂದ 4 ನನ್ನ ಅಜ್ಜ, ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರು ಎಲ್ಲರು ಕೂಡಿಕೊಂಡು ಸಂಪಾದನೆ ಮಾಡಿರುವಂತಹ ಆಸ್ತಿಗಳಾಗಿರುವವು. ಈ ದಾವಾ ಆಸ್ತಿಗಳು ಎಲ್ಲವೂ ನಮ್ಮ ಮತ್ತು ಪ್ರತಿವಾದಿಯರ ಕುಟುಂಬದ ಒಟ್ಟು ಮನೆತನದ ಆಸ್ತಿಗಳು ಎಂದರೆ ಸರಿ.

3. ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ದಿಃ 01.06.1992 ನನ್ನ ಜನ್ಮ ದಿನಾಂಕ. ವಿಜಯಕುಮಾರ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಹಿಡಕಲ ಗ್ರಾಮದಲ್ಲಿ ವಾಸವಾಗಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು

ಉತ್ತರಿಸಿರುತ್ತಾರೆ. ಆತ 15 ವರ್ಷ ಇದ್ದಾಗ ಮನೆ ಬಿಟ್ಟು ಹೋಗಿರುವುದರಿಂದ ಆತನ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಈ ಸಂಗತಿ ನನಗೆ ನನ್ನ ತಂದೆಯ ಮೂಖಾಂತರ ಗೊತ್ತಾಗಿರುವುದು. ವಿಜಯಕುಮಾರ ಹಿಡಕಲ ಗ್ರಾಮದಲ್ಲಿ ವಾಸವಾಗಿದ್ದಾಗ ಮೇಲಿಂದ ಮೇಲೆ ಬೆಳಗಲಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದನು ಎಂದರೆ ಸರಿಯಲ್ಲ. ಇತ ದಿಃ 22.11.1983 ರಲ್ಲಿ ಹಿಡಕಲ ಗ್ರಾಮದ ಯಲ್ಲವ್ವ ತಂದೆ ಫೀರಪ್ಪ ಹರಿಜನ @ ನಡಿಕೇರಿ ಎಂಬುವವಳನ್ನು ವಿವಾಹ ಮಾಡಿಕೊಂಡಿರುವನು ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಇವರ ವಿವಾಹವನ್ನು ಪ್ರತಿವಾದಿ 1, 2, 3, 4 ಎಲ್ಲರೂ ಕೂಡಿಯೇ ಹೋಗಿ ಈ ವಿವಾಹ ಮಾಡಿರುವರು ಎಂದರೆ ಸರಿಯಲ್ಲ. ಇವರ ವೈವಾಹಿಕ ಜೀವನದಿಂದ ಪ್ರತಿವಾದಿ 8 ಮತ್ತು 9 ರವರು ಜನ್ಮ ತಾಳಿರುವರು ಎಂದರೆ ಸರಿಯಲ್ಲ. ದಿಃ 16.03.2003 ರಲ್ಲಿ ಪ್ರತಿವಾದಿ 8 ಮತ್ತು 9 ರವರ ತಾಯಿಯಾದ ಯಲ್ಲವ್ವ ಮೃತ ಪಟ್ಟಿರುವಳು ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಈ ಪ್ರತಿವಾದಿಯರ ತಂದೆ ವಿಜಯಕುಮಾರ ದಿಃ 07.05.2019 ರಂದು ಮೃತ ಪಟ್ಟಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ವಿಜಯಕುಮಾರನಿಗೆ ಪ್ರತಿವಾದಿ 8 ಮತ್ತು 9 ರವರು ನೇರವಾರಸುದಾರರು ಇದ್ದರೂ ಸಹಿತ ವಿಜಯಕುಮಾರ 15 ವರ್ಷದವನಿದ್ದಾಗೇ ಮನೆ ಬಿಟ್ಟು ಹೋಗಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 8 ಮತ್ತು 9 ರವರಿಗೆ ಪಾಲು ನೀಡಬಾರದು ಎಂಬ ಕಾರಣಕ್ಕೆ, ವಿಜಯಕುಮಾರ ಮನೆ ಬಿಟ್ಟು ಹೋಗಿದ್ದು, ಆತನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಉದ್ದೇಶಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳಲ್ಲಿ ಪ್ರತಿವಾದಿ 8 ಮತ್ತು 9 ರವರಿಗೂ ಸಹ ಪಾಲು ಇರುವುದು ಎಂದರೆ ಸರಿಯಲ್ಲ.

4. ಈ ಮೊದಲು ಈ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 149/2022 ರ ಪಾಲು ವಾಟ್ನಿಯ ದಾವೆಯನ್ನು ದಾಖಲು ಮಾಡಿದ್ದೇವು ಎಂದರೆ ಸರಿ. ಆ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯರಾದ 8 ಮತ್ತು 9 ರವರು ಸಹ ಹಾಜರಾಗಿ ತಮ್ಮ ಎದುರು ಕ್ಲೇಮ್ ಹಕ್ಕನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆ ವಿಚಾರಣೆಯ ಹಂತದಲ್ಲಿ ಇದ್ದಾಗ ಅದನ್ನು

ಹಿಂಪಡೆದಿದ್ದೇವೆ ಎಂದರೆ ಸರಿ. ಆ ದಾವೆಗೆ ತಾಂತ್ರಿಕ ದೋಷ ಇರುವುದರಿಂದ ಹಿಂಪಡೆದುಕೊಂಡಿದ್ದೇವೆ. ಆ ದಾವೆಯಲ್ಲಿ ವಕೀಲರ ಮೇಲೆ ಆರೋಪಣೆ ಮಾಡಿ ಪ್ರಮಾಣ ಪತ್ರ ಸಲ್ಲಿಸಿದ್ದೇವೆ ಎಂದರೆ ಸರಿ. ಆ ದಾವೆಯನ್ನು ಮುಂದುವರೆಸಲು ನಮಗೆ ಯಾವುದೇ ಸಕಾರಣಗಳು ಇರಲಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.10.15 10:39:43 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ